# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ


ಕಾರ್ಪೋರೇಟ್ ಕಛೇರಿ ವಿಳಾಸ:
ನಿಗಮ ಕಾರ್ಯಾಲಯ, ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017
ದೂರವಾಣಿ: 0821-2417107
Website: www.cescmysore.org
CIN: U40109KA2004SGC035177

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),
ರವರ ಕಛೇರಿ ಸೆಸ್ಕ್, ನಗರ ಉಪವಿಭಾಗ, ಹಾಸನ
ಸಂತೇಪೇಟೆ, ಬಿ.ಎಂ. ರಸ್ತೆ, ಹಾಸನ-573201
ದೂರವಾಣಿ: 08172-268829
E-Mail: aeecsdhsn@rediffmail.com


ನಂ: ಸ.ಕಾ.ಅ(ವಿ)./ಸಇಂ(ತಾ)/ನ.ಉ.ವಿ./ಹಾಸನ/18-19/5121-28 ದಿನಾಂಕ: 06.03.2019

## "ಜನಸಂಪರ್ಕ ಸಭೆಯ ನಡಾವಳಿಗಳು"

ದಿನಾಂಕ: 21.02.2019 ರಂದು ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ನಗರ ಉಪ-ವಿಭಾಗ ಕಛೇರಿಯಲ್ಲಿ ನಡೆದ **ಜನಸಂಪರ್ಕ ಸಭೆಯ** ನಡಾವಳಿಗಳು.

********

ಶ್ರೀಯುತರಾದ ಶ್ರೀ ಸ್ವಾಮಿಗೌಡ, ಕಾರ್ಯಪಾಲಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹಾಸನರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಬೆಳಗ್ಗೆ: 11:00 ಗಂಟೆಗೆ ಪ್ರಾರಂಭಿಸಲಾಯಿತು.

***ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಹೆಸರು:***

1. ಶ್ರೀ ಹೇಮಚಂದ್ರ ಕೆ.ಸಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಹಾಸನ.
2. ಶ್ರೀಮತಿ ಮೇಘನ ಜಿ.ಎಂ, ಸಹಾಯಕ ಇಂಜಿನಿಯರ್(ತಾ), ನಗರ ಉಪವಿಭಾಗ, ಹಾಸನ.
3. ಕು॥ ಡೆನ್‌ಜಿಲ್ ಗ್ಲೋರಿಯಾ ಡೆನಿಸ್, ಸಹಾಯಕ ಲೆಕ್ಕಾಧಿಕಾರಿ, ನಗರ ಉಪವಿಭಾಗ, ಹಾಸನ.
4. ಶ್ರೀ ಗಿರಿರಾಜ್, ಕಿರಿಯ ಇಂಜಿನಿಯರ್(ವಿ), ಸತ್ಯಮಂಗಲ ಶಾಖೆ, ನಗರ ಉಪವಿಭಾಗ, ಹಾಸನ.

**ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಹೆಸರು:**

1. ಶ್ರೀ ಸುದೀಂದ್ರ, ವಿದ್ಯುತ್ ನಗರ, ಹಾಸನ.
2. ಶ್ರೀ ಟಿ.ಎಸ್ ಶಾಂತಮೂರ್ತಿ, ತಿರುಪತಿಹಳ್ಳಿ, ದುದ್ದ.
3. ಶ್ರೀ ಸಿದ್ದಪ್ಪ, ಜಿಲ್ಲಾದ್ಯಕ್ಷರು ರೈತ ಸಂಘ, ಹೊನ್ನಾವರ.

********

ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ನಗರ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ಸಭೆಯನ್ನು 1:00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

೧. ಶ್ರೀ ಸುದೀಂದ್ರ, ವಿದ್ಯುತ್ ನಗರ, ಹಾಸನರವರು ಸಭೆಯಲ್ಲಿ ಹಾಜರಿದ್ದು, ತಮ್ಮ 64673 ಎಲ್.ಟಿ ಸ್ಥಾವರದ ಮೀಟರ್ ಕಳೆದ ೦೬ ತಿಂಗಳ ಹಿಂದೆಯೇ ಹಾಳಾಗಿದ್ದು ಇದುವರೆಗೂ ಸಹ ಬದಲಾವಣೆಯಾಗದಿರುವ ಕುರಿತಾಗಿ ತಿಳಿಸುತ್ತಾ ಸದರಿ ಮೀಟರ್‌ನ್ನು ತುರ್ತಾಗಿ ಬದಲಾಯಿಸಕೊಡಬೇಕಾಗಿ ಮನವಿ ಮಾಡಿದರು. ಈ ಕುರಿತಾಗಿ ಅದ್ಯಕ್ಷರು ಉಗ್ರಾಣದಲ್ಲಿ ಮೀಟರ್ ಗಳ ದಾಸ್ತಾನು ಇಲ್ಲದಿರುವುದರಿಂದ ಬದಲಾಯಿಸಲು ವಿಳಂಬವಾಗಿರುವುದಾಗಿ ತಿಳಿಸುತ್ತಾ ಮೀಟರ್‌ಗಳನ್ನು ತರಿಸಲು ಸೂಕ್ತ ಕ್ರಮವಹಿಸಿ ಹಾಳಾಗಿರುವ ಮೀಟರ್‌ನ್ನು ಬದಲಾಯಿಸಲು ಶೀಘ್ರ ಕ್ರಮ ಕೈಗೊಳ್ಳುವುದಾಗಿ ಗ್ರಾಹಕರಿಗೆ ತಿಳಿಸಿದರು.

೨. ಶ್ರೀ ಟಿ.ಎಸ್ ಶಾಂತಮೂರ್ತಿ, ತಿರುಪತಿಹಳ್ಳಿ, ದುದ್ದ ಮತ್ತು ಶ್ರೀ ಸಿದ್ದಪ್ಪ, ಜಿಲ್ಲಾದ್ಯಕ್ಷರು ರೈತ ಸಂಘ, ಹೊನ್ನಾವರರವರು ಸಭೆಯಲ್ಲಿ ಹಾಜರಿದ್ದು ದುದ್ದ ಉಪ-ವಿಭಾಗ ವ್ಯಾಪ್ತಿಯಲ್ಲಿನ ಕಂಬಗಳನ್ನು ಸ್ಥಳಾಂತರಿಸುವ ಕುರಿತಾಗಿ ಮನವಿ ಮಾಡಿದರು. ಈ ಕುರಿತಾಗಿ ಸದರಿ ಗ್ರಾಹಕರಿಂದ ಅರ್ಜಿ ಪಡೆದು ಸಂಬಂದ ಪಟ್ಟ ದುದ್ದ ಉಪ-ವಿಭಾಗಧಿಕಾರಿಯವರಿಗೆ ಅರ್ಜಿಯನ್ನು ರವಾನಿಸಲಾಯಿತು.

7/3/19

**ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),**

**ಪ್ರತಿಯನ್ನು ಸಲ್ಲಿಸಿದೆ:**

1. ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು ರವರ ಆದ್ಯ ಅವಗಾಹನೆಗಾಗಿ.
2. ಮುಖ್ಯ ಇಂಜಿಯರ್(ವಿ), ವಲಯ ಕಚೇರಿ, ಚಾ.ವಿ.ಸ.ನಿ.ನಿ., ಮೈಸೂರು ರವರ ಆದ್ಯ ಅವಗಾಹನೆಗಾಗಿ.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಹಾಸನ ರವರ ಆದ್ಯ ಅವಗಾಹನೆಗಾಗಿ.
4. ಕಾರ್ಯಪಾಲಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಹಾಸನ ರವರ ಆದ್ಯ ಅವಗಾಹನೆಗಾಗಿ.
5. ಸಹಾಯಕ ಲೆಕ್ಕಾಧಿಕಾರಿ, ನಗರ ಉಪವಿಭಾಗ, ಹಾಸನ.
6. ಎಲ್ಲಾ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್, ನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಹಾಸನ.
7. ಕಡತಕ್ಕೆ.